'ಹಲೋ ನಾನು ಮಾಯಿ!'

ಬೆಳ್ಳಂ ಬೆಳಗ್ಗೆ ಅವಳ ಮಾತು ಕೇಳಿದರೆ ಎಂಥದೋ ಖುಷಿ. ಉದಯಿಸುವ ಸೂರ್ಯನ ಕಿರಣಗಳು ಕಣ್ಮನದ ಮೇಲೆ ಹರಿದಾಡಿದಂತೆ, ಚಿಗುರೆಲೆಯ ತೀಡಿ ಬರುವ ತಂಗಾಳಿ ಕಚಗುಳಿ ಇಟ್ಟಂತೆ, ಮುಂಜಾವಿನ ಉಷೆ ನಸು ನಾಚಿ ಕೆನ್ನೆ ಸವರಿದಂತೆ! ಹೌದು, ಅವಳ ಮಾತು ಕೇಳಿದವರಿಗೆ ಇನ್ನೇನೋ ವರ್ಣಿಸಬೇಕೆನಿಸುತ್ತದೆ. ವಿಶೇಷವೆಂದರೆ ಅವಳಿಗೆ ಇದ್ಯಾವುದರ ವರ್ಣನೆಯೇ ಬೇಡ! ಮಾಯಿಗೆ ಸಾಹಿತ್ಯದ ಅರಿವು ಇರುವುದರಿಂದ ಬಣ್ಣಿಸುವ ಮಾತನಾಡಿದರೆ ಅವಳಿಗೆ ಎಂಥದೋ ಇರಿಸುಮುರಿಸು!

'ನವೋದಯ ಕವಿಗಳಂತೆ ನನ್ನನ್ನು ಪ್ರಕೃತಿಗೆ ಹೋಲಿಸುವುದು ಬೇಡ. ನವ್ಯದಲ್ಲಿನ ರೂಪಕವಾಗಿ ನನ್ನ ವ್ಯಕ್ತಿತ್ವವನ್ನು ಸಾಂಕೇತಿಕರಿಸುವುದೂ ಸಲ್ಲ. ಬಂಡಾಯದ ಧೋರಣೆಯೂ ಆಗದು. ಪ್ರಗತಿ ಶೀಲರ ಚಿಂತನೆಯಲ್ಲೂ ನನ್ನನ್ನು ಕಾಣಬಾರದು' ಎಂಬುದು ಅವಳ ಕಂಡಿಷನ್ನು! ಇಂಥ ಟಿಪಿಕಲ್ ಗುಣಗಳಿಂದಲೇ ನನಗೆ ಪರಿಚಯವಾದ ಮಾಯಿ, ಮಾನಸಿಕವಾಗಿ ಹತ್ತಿರವಾಗಲು ಆಕೆ ಒಡ್ಡಿದ ಅಗ್ನಿಪರೀಕ್ಷೆ ಒಂದೇ ಎರಡೇ?! ಒಂದು ದಿನ ಫೋನ್ ಮಾಡುವುದು, ಪುನಃ ವಾರ ಬಿಡುವುದು. ನಾನು ರಿಂಗ್ ಮಾಡಿದ್ರೆ ಸ್ವಿಚ್ ಆಫ್ ಆಗಿರುವುದು. ಆಕೆಯೇ ಫೋನ್ ಮಾಡಿದಾಗ 'ಯಾಕೆ ಹೀಗೆ?' ಅಂದ್ರೆ, 'ಹಿಂಗಾ ಸುಮ್ನೆ!' ಅಂತ ನಗುವುದು. ಇದೇ ವರಸೆ ಮುಂದುವರಿದಾಗ ಸಿರಿಯಸ್ಸಾಗಿದ್ರೆ ಮತ್ತೆ ಮತ್ತೆ ಅವಳಿಂದಲೇ ಫೋನ್!

'ಮಾಯಿ, ಹಾಗೇಕೆ ಮಾಡ್ತೀ?' ಪುನಃ ನನ್ನ ಪ್ರಶ್ನೆಗೆ 'ನೋಡ್ರಪಾ, ನಾವ್ ಹೆಣ್ಮಕ್ಳು. ಹಂಗ ಟೆಸ್ಟ್ ಮಾಡ್ತಾ ಇರ್ತೇವು. ಎಲ್ಲಾದ್ರಲ್ಲೂ ಪಾಸಾದ್ರ ಮಾತ್ರ ಮಾತು, ಅರ್ಥಾಯಿತ್ರಾ?' ಕ್ಷಣಕಾಲ ನನಗೆ ನಗೆ, ವಿಷಾದ, ಜುಗುಪ್ಸೆ. ಒಂದೆರಡು ವರ್ಷಗಳವರೆಗೆ ಇದೇ ರೀತಿಯ ಆಕೆಯ ಲಹರಿಯನ್ನು ಸಹಿಸಿಕೊಂಡ ಪರಿ ಅಚ್ಚರಿ ಅನ್ನಿಸುತ್ತದೆ. ಒಂದು ದಿನ ಬೆಂಗಳೂರಿನ ಮಲ್ಲೇಶ್ವರದ ಎಂಟನೇ ಕ್ರಾಸ್‌ನಲ್ಲಿ ಬೈಕ್ ಓಡಿಸುತ್ತಿರುವಾಗ ನನಗೆ ಸಣ್ಣ ಆಕ್ಸಿಡೆಂಟ್. ಆಸ್ಪತ್ರೆ ಪಾಲಾಗಿದ್ದೆ. ಅವಳ ಫೋನ್ ರಿಸೀವ್ ಮಾಡಲಾಗಿರಲಿಲ್ಲ. ಬಹುಶಃ ನನ್ನ ಗೆಳೆಯ ಸೂರಿಯೇ ಫೋನೆತ್ತಿಕೊಂಡು ಇದೆಲ್ಲ ಆಕೆಗೆ ಹೇಳಿರಬೇಕು. ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ವಿಶ್ರಾಂತಿಯಲ್ಲಿದ್ದಾಗ ಮಾಯಿಯ ಫೋನ್! ಆಗವಳು ಜೋರಾಗಿ ಸುರಿದ ಮುಂಗಾರು! ಅದರಲ್ಲಿ ನನ್ನ ಮಾತು ಕಳೆದು ಹೋಗಿದ್ದು ಹಾಗಿರಲಿ, ಪ್ರತಿಯೊಂದು ನಿಮಿಷವೂ ಅವಳ ಭಾವುಕತೆ ಜೊತೆ ಮಿಂದೆದ್ದ ಮಧುರ ಕ್ಷಣಗಳನ್ನು ನಿಮಗೆ ಹೇಗೆ ಮನವರಿಕೆ ಮಾಡಿಸುವುದು? ನನ್ನ ಬದುಕು ಅಧೀರವಾದಾಗಲೆಲ್ಲ ಧೈರ್ಯ ತುಂಬುವ, ಇನ್ನೇನು ಎಲ್ಲವೂ ಮುಗಿದೇ ಹೋಯಿತು ಎನ್ನುವಾಗ ಮಾಯೆಯಾಗಿ ಕೈ ಹಿಡಿದ ಮಾಯಿಯ ಪರಿಚಯದ ಪರಿಯನ್ನು ನಿಮಗೆ ಹೇಗೆ ಪರಿಚಯಿಸುವುದು?!

*****

ಇದೆಲ್ಲ ಶುರುವಾಗಿದ್ದೂ ಒಂದು ಮಿಸ್ ಕಾಲ್‌ನಿಂದ. ಯಾರಿಗೋ ಫೋನ್ ಮಾಡಲು ಹೋಗಿ ಮತ್ಯಾರಿಗೋ ರಿಂಗಾಗಿ, 'ಹಲೋ ಯಾರು?' ಅಂತ ನಾನು ಕೇಳಿದ್ದಕ್ಕೆ, 'ಫೋನ್ ಮಾಡಿದ್ದು ನೀವು, ಮೊದ್ಲೇಳ್ರಲ್ಲಾ, ನೀವ್ಯಾರು' ಎಂದಿತ್ತು ಮಿಂಚು ಸಂಚಾರದ ಕಂಚು ಕಂಠದ ಧ್ವನಿ. ಮಾತಿನಲ್ಲಿ ಗಡಸುತನ ಎದ್ದು ಕಾಣುತ್ತಿದ್ದರೂ, ಶಬ್ದದಲ್ಲಿ ಹಿತ! ನನ್ನ ತಲೆಹರಟೆ ಸ್ವಭಾವ ಇಂಥ ಛಾನ್ಸ್ ಕಳೆದುಕೊಳ್ಳಲು ತಯಾರಿರಲಿಲ್ಲ.

'ನಾನ್ಯಾರಾದ್ರೆ ನಿಮ್ಗೇನ್ರಿ... ನಿಮ್ಮ ಸ್ವಾಮೀಜಿ ಇದ್ದಾರಾ?' ಅಂತ ಶುರುವಿಟ್ಟೆ. ಇದು ಆಕೆಯ